## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಿ.ಆ/ಪಿಎಸ್ಆರ್/8698/2016-17

ವಿಶೇಷ ಆಯುಕ್ತರು (ಯೋಜನೆ)
ಪಾಲಿಕೆ ಪ್ರಧಾನ ಕಛೇರಿ
ನರಸಿಂಹ ರಾಜ ಚೌಕ
ಬೆಂಗಳೂರು
ದಿನಾಂಕ: 18-02-2017

# ಕಛೇರಿ ಆದೇಶ

**ವಿಷಯ:-** ಬೃಹತ್ ಬೆಂಗಳೂರು ಮಹನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಟೆಂಡರ್ ಷೂರ್ (Tender SURE) ರಸ್ತೆಗಳಿಗೆ ಓ.ಎಫ್.ಸಿ ಅಳವಡಿಸಲು ದರ ನಿಗಧಿಪಡಿಸಿ ಓ.ಎಫ್.ಸಿ ಸಂಸ್ಥೆಗಳಿಗೆ ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:-** 1) ಸಂಖ್ಯೆ: ಆ/ಪಿಎಸ್ಆರ್(ಜ)10324/12-13, ದಿನಾಂಕ: 28-02-2013
2) ಸಂಖ್ಯೆ: ವಿ.ಆ/ಪಿಆರ್/7253, ದಿನಾಂಕ: 28-12-2016
3) ಸಂಖ್ಯೆ: ಬೆಂ.ಅ.ನ.ಯೋ.ಸ/ವಿ.ಕ/81/2016-17, ದಿನಾಂಕ: 01-02-2017, ಸಭೆ ನಡಾವಳಿಗಳು ದಿನಾಂಕ: 03-02-2017
4) ಸಂಖ್ಯೆ: ಮು.ಅ/ಪಿಆರ್/1683/16-17, ದಿನಾಂಕ: 16-02-2017
5) ಸಂಖ್ಯೆ: ವಿ.ಆ/ಪಿಆರ್/8632/16-17 ದಿನಾಂಕ: 16-02-2017
6) ಸಂಖ್ಯೆ: ಆ/ಪಿಎಸ್ಆರ್(ಜ)7809/16-17, ದಿನಾಂಕ: 17-02-2017

*********

## ಪ್ರಸ್ತಾವನೆ

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಈಗಾಗಲೇ ದರ ನಿಗಧಿಪಡಿಸಿ ಓ.ಎಫ್.ಸಿ ಸೇವಾ ಸಂಸ್ಥೆಗಳಿಂದ ಪಾಲಿಕೆಗೆ ನಿಗಧಿತ ಶುಲ್ಕ ಪಡೆದು ಅನುಮತಿ ನೀಡಲಾಗುತ್ತಿದೆ. ಪಾಲಿಕೆಯು ಕೆಲವು ಮುಖ್ಯ ರಸ್ತೆಗಳನ್ನು ಮಾದರಿ ರಸ್ತೆಗಳನ್ನಾಗಿ Tender SURE ಅಡಿಯಲ್ಲಿ ಅಭಿವೃದ್ಧಿ ಪಡಿಸಿದ್ದು, ಅದರಲ್ಲಿ ಮೂಲ ಸೌಕರ್ಯಗಳನ್ನು ಅಳವಡಿಸಲಾಗಿರುತ್ತದೆ. ಅದರಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಕೆಗಾಗಿ ಪ್ರತ್ಯೇಕ ಕಂಡ್ಯೂಟ್‌ಗಳನ್ನು ಹಾಗೂ ಛೇಂಬರ್‌ಗಳನ್ನು ರಸ್ತೆಯ ಎರಡೂ ಬದಿಯಲ್ಲಿ ಅಳವಡಿಸಲಾಗಿರುತ್ತದೆ. ಅದರಂತೆ ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ Tender SURE ರಸ್ತೆ ಅಭಿವೃದ್ಧಿ ವೆಚ್ಚ ಆಧರಿಸಿ ಓ.ಎಫ್.ಸಿ ಕೇಬಲ್ ಅಳಡಿಕೆಗೆ ದರ ನಿಗಧಿಗೊಳಿಸಿದ್ದು, ಮಾನ್ಯ ಆಯುಕ್ತರು ದಿನಾಂಕ: 17-02-2017 ರಂದು ಅನುಮೋದನೆ ನೀಡಿರುತ್ತಾರೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ Tender SURE ಮಾದರಿ ರಸ್ತೆಗಳಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಪ್ರತಿ ಮೀಟರ್ ಓ.ಎಫ್.ಸಿ ಕೇಬಲ್ ಅಳವಡಿಕೆಗೆ ರೂ.1500/- ಗಳನ್ನು ಹಾಗೂ ಭದ್ರತಾ ಠೇವಣಿಯಾಗಿ ಪ್ರತಿ ಮೀಟರ್‌ಗೆ ರೂ.800/-ಗಳನ್ನು ನಿಗಧಿಪಡಿಸಲಾಗಿರುತ್ತದೆ. ಇತರೆ ಶುಲ್ಕಗಳು ಈ ಹಿಂದಿನಂತಿರುತ್ತವೆ. Tender SURE ರಸ್ತೆಗಳಲ್ಲಿ ಓ.ಎಫ್.ಸಿ ಅಳವಡಿಕೆಗಾಗಿ ಪಾವತಿಸಿಕೊಳ್ಳುವ ಭದ್ರತಾ ಠೇವಣಿಯನ್ನು ಕಾಮಗಾರಿಯು ತೃಪ್ತಿಕರವಾಗಿ ನಿರ್ವಹಿಸಿದ ಮೂರು ತಿಂಗಳಿನ ನಂತರ ಹಿಂದಿರುಗಿಸಲಾಗುವುದು.

ಮಾನ್ಯ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ.

18/2

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

P.T.O